# ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ (SA 1)

ತರಗತಿ: **9**ನೇ ತರಗತಿ **2025-26** ಅಂಕಗಳು: **80**

ವಿಷಯ: ಸಮಾಜ ವಿಜ್ಞಾನ ಸಮಯ: **3** ಗಂಟೆ

---

**I.** ಈ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: **8x1=8**

**1.** ಮಹಮ್ಮದ್ ಪೈಗಂಬರ್ ರವರ ಉತ್ತರಾಧಿಕಾರಿಗಳನ್ನು ಹೀಗೆ ಕರೆಯಲಾಗುತ್ತದೆ.
A) ಪೋಪ್. B) ಖಲೀಫರು. C) ಸುಲ್ತಾನ್ D) ಬಿಷಪ್

**2.** ಸಂವಿಧಾನದ 32ನೇ ವಿಧಿ ಪ್ರಕಾರ ಹೊರಡಿಸಬಹುದಾದ ರಿಟ್ ಅರ್ಜಿಗಳ ಸಂಖ್ಯೆ.
A) 6 B) 4
C) 5 D) 7

**3.** "ಕರ್ನಾಟಕದ ಸಾಂಸ್ಕೃತಿಕ ನಾಯಕ" ಎಂದು ಇವರನ್ನು ಕರೆಯುತ್ತಾರೆ.
A) ಶಂಕರಾಚಾರ್ಯ. B) ರಾಮಾನುಜಾಚಾರ್ಯ
C) ಬಸವೇಶ್ವರ D) ಮಧ್ವಚಾರ್ಯ

**4.** ತಾಯಿಯೇ ಕುಟುಂಬದ ಯಜಮಾನಿಯಾದರೆ
A) ಪಿತೃ ಪ್ರಧಾನ ಕುಟುಂಬ B) ಮಾತೃ ಪ್ರಧಾನ ಕುಟುಂಬ C) ಅವಿಭಕ್ತ ಕುಟುಂಬ D) ವಿಭಕ್ತ ಕುಟುಂಬ

**5.** ಕರ್ನಾಟಕದಲ್ಲಿನ ಅತ್ಯಂತ ಎತ್ತರವಾದ ಶಿಖರ
A) ಕಲ್ಹತ್ತಗಿರಿ B) ರುದ್ರಗಿರಿ
C) ಬಾಬಾಬುಡನ್ ಗಿರಿ D) ಮುಳ್ಳಯ್ಯನಗಿರಿ

**6.** ಭವಿಷ್ಯದ ಕಾರ್ಯಾಚರಣೆಯನ್ನು ಮುಂದಾಗಿ ನಿರ್ಧರಿಸುವುದೇ.
A) ಸಂಘಟನೆ B) ನಿರ್ವಹಣೆ C) ಸಂಯೋಜನೆ D) ಯೋಜನೆ

**7.** ಕರ್ನಾಟಕದಲ್ಲಿ ಬೇಸಿಗೆಯ ಮಳೆಯು ಕಾಫಿ ಹೂ ಮಳೆ ಎಂದು ಕರೆಯಲ್ಪಡಲು ಕಾರಣ..
A) ಇದು ಪರಿಸರಣ ಮಳೆಯಾಗಿರುವುದರಿಂದ B) ಈ ಕಾಲದಲ್ಲಿ ಆಲಿಕಲ್ಲುಗಳು ಬಿಳುವುದರಿಂದ
C). ಕಾಫಿ ಗಿಡಗಳು ಹೂ ಬಿಡಲು ನೆರವಾಗುವುದರಿಂದ D)ಗುಡುಗು ಮಿಂಚು ಸಿಡಿಲುಗಳಿಂದ ಕೂಡಿರುವುದರಿಂದ

**8.** ಭಾರತದ ಆಧುನಿಕ ಕೃಷಿ ವ್ಯವಸ್ಥೆಯಲ್ಲಿ ಕಂಡುಬರುವ ನಕಾರಾತ್ಮಕ ಅಂಶ.
A) ಗ್ರಾಮೀಣ ಉದ್ಯೋಗದ ಹೆಚ್ಚಳ . B) ಕೃಷಿ ಉತ್ಪಾದನೆಯಲ್ಲಿ ಕಡಿಮೆಯಾಗಿರುವುದು
C) ಅಂತರ್ಜಲದ ಮಟ್ಟದ ಹೆಚ್ಚಳ. D) ಪರಿಸರ ಮಾಲಿನ್ಯ ಮತ್ತು ಮಣ್ಣಿನ ಸವೆತ

**II.** ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: **8x1=8**

**9.** ದಕ್ಷಿಣ ಭಾರತದ ದಂಡಯಾತ್ರೆ ನೇತೃತ್ವ ವಹಿಸಿದ್ದ ಅಲ್ಲಾವುದ್ದೀನ್ ಖಿಲ್ಜಿಯ ಸೇನಾಧಿಪತಿ ಯಾರು ?
**10.**ಕೇಂದ್ರ ಕುಟುಂಬ ಎಂದರೇನು ?
**11.**ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಯಾವಾಗ ಸ್ಥಾಪಿಸಲಾಯಿತು?
**12.**ವಿಶ್ವದ ಮೊದಲ ಸಂಸತ್ತು ಎಂದು ಯಾವುದನ್ನು ಕರೆಯಲಾಗಿದೆ ?
**13.**ಕುಟುಂಬವು ಸದಸ್ಯರ ನೈತಿಕತೆ ಮತ್ತು ವರ್ತನೆಯನ್ನು ಹೇಗೆ ನಿಯಂತ್ರಿಸುತ್ತದೆ ?
**14.**ನಿಮ್ಮ ಜಿಲ್ಲೆಯು ಯಾವ ಪ್ರಾಕೃತಿಕ ವಿಭಾಗಕ್ಕೆ ಸೇರುತ್ತದೆ ?
**15.**ನಿರ್ವಹಣೆ ಎಂದರೇನು ?
**16.**ರಾಜ್ಯ ಕಾರ್ಯಾಂಗದ ಸಂವಿಧಾನಾತ್ಮಕ ಮುಖ್ಯಸ್ಥರು ಎಂದು ಯಾರನ್ನು ಕರೆಯಲಾಗುತ್ತದೆ?

**III.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: **8x2=16**

**17.**ಲಲಿತಾದಿತ್ಯ ಮುಕ್ತ ಪೀಡನ ಬಗ್ಗೆ ಐತಿಹಾಸಿಕ ಉಲ್ಲೇಖ ನೀಡಿ.
**18.**ಪಾಶ್ಚಿಮಾತ್ಯ ಧರ್ಮಗಳಲ್ಲಿ ಗುರುತಿಸಬಹುದಾದ ಸಾಮಾನ್ಯ ಅಂಶಗಳು ಯಾವುವು?
**19.**ರಾಜ್ಯಪಾಲರಿಗಿರುವ ವಿವೇಚನಾ ಅಧಿಕಾರಗಳನ್ನು ತಿಳಿಸಿ ? ಅಥವಾ ಜನತಾ ನ್ಯಾಯಾಲಯಗಳು ಹೆಚ್ಚು ಜನಪ್ರಿಯವಾಗಲು ಕಾರಣವೇನು ?
**20.**ವ್ಯಕ್ತಿಯ ಸಾಮಾಜಿಕ ಬೆಳವಣಿಗೆಯಲ್ಲಿ ಬಾಲ್ಯ ಮತ್ತು ಯೌವ್ವನದ ಪಾತ್ರವೇನು? ಅಥವಾ ಅವಿಭಕ್ತ ಕುಟುಂಬ ವ್ಯವಸ್ಥೆಯು ಸ್ವಯಂಪೂರ್ಣತೆಯನ್ನು ಹೊಂದಿದೆ ಸಮರ್ಥಿಸಿ.
**20.**ಕರ್ನಾಟಕದ ಪೂರ್ವಭಿಮುಖವಾಗಿ ಹರಿಯುವ ನದಿಗಳು ಮತ್ತು ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಹೆಸರಿಸಿ.
**21.**ಭತ್ತ ಬೆಳೆಯಲು ಬೇಕಾದ ಭೌಗೋಳಿಕ ಅಂಶಗಳು ಯಾವುವು ?
**22.**ತೃತೀಯ ವಲಯದ ಉದ್ಯೋಗಗಳು ಯಾವುವು?
**23.**ನಿರ್ವಹಣೆಯ ತತ್ವಗಳಾವುವು ?

**IV.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ: **9x3=27**

**24.** ಏಸುಕ್ರಿಸ್ತನ ಬೋಧನೆಗಳನ್ನು ತಿಳಿಸಿ

**25.** ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತ ಸುಧಾರಣೆಗಳು ಯಾವುವು? ಅಥವಾ ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವಗಳು ಯಾವುವು?

**26.** ಕೃಷ್ಣದೇವರಾಯನ ಸೈನಿಕ ಸಾಧನೆಗಳನ್ನು ವಿವರಿಸಿ.

**27.** ರಾಜ್ಯಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು?

**28.** ಅವಿಭಕ್ತ ಕುಟುಂಬದ ಲಕ್ಷಣಗಳನ್ನು ಬರೆಯಿರಿ ?

**29.** ಪಶ್ಚಿಮ ಘಟ್ಟಗಳಲ್ಲಿರುವ ಪ್ರಮುಖ ಪರ್ವತ ಘಾಟಿಗಳು ಯಾವುವು?

**30.** ಪ್ರದೇಶದಿಂದ ಪ್ರದೇಶಕ್ಕೆ ಅರಣ್ಯಗಳ ಹಂಚಿಕೆ ವ್ಯತ್ಯಾಸದಿಂದ ಕೂಡಿರಲು ಕಾರಣವೇನು? ಅಥವಾ ಇತ್ತೀಚಿನ ದಿನಗಳಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗುತ್ತಿದೆ ಕಾರಣವಾದ ಅಂಶಗಳನ್ನು ಪಟ್ಟಿ ಮಾಡಿ.

**31.** ಭಾರತದಲ್ಲಿ ಕೈಗಾರಿಕಾ ವಲಯ ಮಹತ್ವ ಪಡೆದಿದೆ. ಹೇಗೆ? ಅಥವಾ ಬ್ರಿಟಿಷ ಆಳ್ವಿಕೆಯ ಕಾಲದಲ್ಲಿ ಭಾರತವು ಸ್ಥಿರಾತ್ಮಕ ಅರ್ಥವ್ಯವಸ್ಥೆ ಹೊಂದಿರಲು ಕಾರಣವೇನು?

**32.** ನಿರ್ವಹಣೆಯ ಕಾರ್ಯಕ್ಷೇತ್ರಗಳನ್ನು ವಿಶ್ಲೇಷಿಸಿ. ಅಥವಾ ವೈಯಕ್ತಿಕ ನಿರ್ಧಾರವು ಗುಂಪು ನಿರ್ಧಾರಕ್ಕಿಂತ ಭಿನ್ನ ಹೇಗೆ.

**V.** ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: **4x4=16**

**33.** ಮಹಮ್ಮದ್ ಗವಾನ್ ಬಹಮನಿ ರಾಜ್ಯದ ಪ್ರಧಾನ ಮಂತ್ರಿಯಾಗಿ ಮಾಡಿದ ಸಾಧನೆಗಳನ್ನು ತಿಳಿಸಿ.

**34.** ವ್ಯವಸಾಯವು ಆರ್ಥಿಕ ಅಭಿವೃದ್ಧಿಯ ಬೆನ್ನೆಲುಬಾಗಿದೆ ವಿಶ್ಲೇಷಿಸಿ.

**35.** ಭಾರತದ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ತಿಳಿಸಿ.

**36.** ಕಲೆ ಮತ್ತು ವಾಸ್ತುಶಿಲ್ಪಕ್ಕೆ ದೆಹಲಿ ಸುಲ್ತಾನದ ಕೊಡುಗೆಗಳನ್ನು ತಿಳಿಸಿ ಅಥವಾ ಬಸವಣ್ಣನವರು ಮಾಡಿದ ಕಲ್ಯಾಣ ಕಾರ್ಯಗಳನ್ನು ತಿಳಿಸಿ'

**VI.** **38.** ಕರ್ನಾಟಕದ ನಕ್ಷೆ ಬರೆದು, ಈ ಕೆಳಗಿನವುಗಳನ್ನು ಗುರುತಿಸಿ. **5x1=5**

a) ತಲಕಾವೇರಿ b) ಕುದುರೆಮುಖ

c) ಕೃಷ್ಣ ನದಿ d) ಮಹಾತ್ಮ ಗಾಂಧಿ ಜಲವಿದ್ಯುತ್ ಕೇಂದ್ರ

e) ಶಿವನಸಮುದ್ರ f) ಮಂಗಳೂರು ಬಂದರು g) ತುಂಗಾಭದ್ರ ನದಿ

**********************